Fire Accident at Totanahalli.

Q.—50. Sri DIGAMBARA RAO BALWANT RAO (Aland).—

Will the Minister for Revenue and Forests be pleased to state :—

(*a*) the cause for the fire accident that occurred at Totanahalli in Periyapatna Taluk of Mysore District ;

(*b*) whether immediate relief is extended to the sufferers ?

A.—Sri B. RACHAIAH (Minister for Revenue and Forests).—

(*a*) One of the huts caught fire from sparks from an open hearth and due to the prevailing wind, the neighbouring huts caught fire.

(*b*) Yes.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್.—ಇಲ್ಲಿ ಒಟ್ಟು 66,050 ರೂಪಾಯಿ 50 ಪೈಸೆ. ನಷ್ಟವಾಗಿರುವಾಗ ಕೇವಲ 12 ರೂಪಾಯಿ 50 ಪೈಸೆ ಹಾಗೂ ಹತ್ತು ಕಿಲೋ ಮೈಲೊ ಕೊಟ್ಟರೆ ಇವರೆಲ್ಲರಿಗೂ ರಿಲೀಫ್ ಕೊಟ್ಟಂತಾಗುತ್ತದಯೇ ?

ಶ್ರೀ ಬಿ. ರಾಚಯ್ಯ.—ನಷ್ಟವಾಗಿರುವ ಜಾಗಗಳಲ್ಲಿ ಯಾವ ರೀತಿ ಪರಿಹಾರ ಕೊಡಬೇಕೆಂದು ಸರಕಾರದ ಆರ್ಡರು ನಂಬರು ಆರ್. ಡಿ. ಎಫ್. 34 ತಾರೀಖು 21-7-58 ರಲ್ಲಿ ನಮೂದು ಮಾಡಿದ್ದಾರೆ. ಅದರ ಪ್ರಕಾರ ಎಷ್ಟು ನಷ್ಟವಾಗಿದೆಯೋ ಅದಕ್ಕೆ ತಕ್ಕಂತೆ ನುಮಾರು ಒಬ್ಬರಿಗೆ 40 ರೂಪಾಯಿಗಳಷ್ಟು ಕೊಡಲು ಅವಕಾಶವಿದೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಈ ವಿಧವಾದ ನಷ್ಟವಾಗಲು ಇದರ ಮೂಲ ಕಾರಣವೇನು ?

ಶ್ರೀ ಬಿ. ರಾಚಯ್ಯ.—ನುಮಾರು ಎಂಟು ವರ್ಷದ ಮುಗು ಹುರುಳಿಯನ್ನು ಹುರಿಯುತ್ತಿತ್ತಂತೆ. ಆ ಕಾಲದಲ್ಲಿ ಅದು ಹೊರಗಡೆಗೆ ಹೋಗಿ ನೀರು ತರಲು ಹೋಯಿತು. ಆಗ ಗಾಳಿಯು ಹೆಚ್ಚಾಗಿ ಬೀಸಿ ಅಲ್ಲಿರುವ ಗುಡಿಸಲಿಗೆ ಬೆಂಕಿ ಹತ್ತಿಕೊಂಡು ಇತರ ಗುಡಿಸಲುಗಳಿಗೂ ಹರಡಲು ಕಾರಣವಾಯಿತು ಎಂದು ನಮಗೆ ಬಂದಿರುವ ರಿಪೋರ್ಟ್‌ನಲ್ಲಿದೆ.

Sri DIGAMBARA RAO BALWANT RAO.—What further help the Government proposes to give to the victims ? May I know whether the Government proposes to build Houses for the victims ?

Sri B. RACHAIAH.—As per Government rules, they are entitled for a relief of Rs. 300 *i.e.*, in the form of Cash Rs. 100 and in the form of materials Rs. 200 in all Rs. 300.

Sri DIGAMBARA RAO BALWANT RAO.—It appears that all their dwelling places have been destroyed. The quantum of relief is very less. May I know whether the relief given is sufficient for them ? When Tibetans and others are rehabilitated in the State, are not our brethren here entitled to be rehabilitated ?

Sri B. RACHAIAH.—This is only by way of an immediate relief. They are entitled to take loan for construction of Houses. There is a scheme for that.

ಶ್ರೀ ಜಿ. ದುಗ್ಗಪ್ಪ.—ಅಕಸ್ಮಿಕವಾಗಿ ಬೆಂಕಿ ತಗಲಿದಾಗ ಲಕ್ಷಾಂತರ ರೂಪಾಯಿಗಳು ನಷ್ಟವಾದಾಗ ಅಲ್ಲಿನ ಜನಗಳಿಗೆ ಮನೆಗಳನ್ನು ಕಟ್ಟಿಕೊಳ್ಳಲು ಮಾಫಿ ಲೈಸನ್ಸ್ ಕೊಡುತ್ತಾರೆ, ಹಾಗೂ ರಿಯಾಯಿತಿ ದರಗಳಲ್ಲಿ ಮನೆಕಟ್ಟುವುದಕ್ಕೆ ಸಾಮಾನುಗಳನ್ನು ಕೊಡುತ್ತಾರೆ. ಸರಕಾರ ಈ ರೀತಿ ಒದಗಿಸುವುದಕ್ಕೆ ಅವಕಾಶವಿದೆ. ಈ ಸಹಾಯವನ್ನು ಸರಕಾರ ಇಲ್ಲಿನ ಜನಕ್ಕೂ ತೀವ್ರವಾಗಿ ದೊರಕಿಸಿಕೊಡುತ್ತೀರಾ ?